


# ಘಾತ

ಮುಂಜಾನೆ ಎದ್ದಾಗ ಆರು ಗಂಟೆ ಮೀರಿ ಹೋಗಿತ್ತು. ಥತ್! ಈ ಚಳಿಗೆ ನಿದ್ದೆಯೇ ಹರಿಯುವುದಿಲ್ಲ. ಫೋನಿನಲ್ಲಿ ಅಲರಾಂ ಇಟ್ಟಿದ್ದು ಹೌದು. ಆದರೆ ಟೀವಿ ರಿಮೋಟುಗಳ ಜೊತೆಗೆ ಫೋನು ಹಾಲಿನಲ್ಲೇ ಇದೆ. ಅದು ಕಿರುಚಿದ್ದು ಎಲ್ಲಿ ಕೇಳಲು ಸಾಧ್ಯ? ಈ ನೆವಕ್ಕೆ ದಿನದ ಬದುಕೇನು ಕಾಯುವುದಿಲ್ಲವಲ್ಲ. ಎಂದಿಗಿಂತ ತುಸು ಹೆಚ್ಚಾಗಿಯೇ ಗಡಿಬಿಡಿ ಮಾಡುವುದು ಇಂದು ಅನಿವಾರ್ಯವಾಗಿತ್ತು. ದೈನಂದಿನ ಕೆಲಸ ಎಲ್ಲಿ ಸ್ವಲ್ಪ ತಡವಾದರೂ ಇಡೀ ದಿನದ ಕಾರ್ಯಕ್ರಮ ಅಲ್ಲೋಲಕಲ್ಲೋಲ. ದೋಸೆಯ ಹಿಟ್ಟಿರುವುದರಿಂದ ತಿಂಡಿಯ ಚಿಂತೆಯಿಲ್ಲ. ಆದರೆ ನಾಲ್ಕು ಜನರಿಗೆ ಮೂರು ರೀತಿಯ ಊಟದ ಡಬ್ಬಿ ತಯಾರಾಗಬೇಕು. ದೊಡ್ಡವಳೇನೋ ಐದನೇ ಕ್ಲಾಸಿನವಳು, ತನ್ನಷ್ಟಕ್ಕೆ ತಯಾರಾಗುತ್ತಾಳೆ. ಚಿಕ್ಕದಿನ್ನೂ ಒಂದನೇ ಕ್ಲಾಸು, ಎಲ್ಲದಕ್ಕೂ ಆಕೆಗೆ ನೆರವು ಬೇಕು.